17.	ದಕ್ಷಿಣ ಕನ್ನಡ	242
18.	ಉಡುಪಿ	231
19.	ಬೆಳಗಾಂ	83
20.	ಚಿಕ್ಕೋಡಿ	
21.	ಬಿಜಾಪುರ	117
22.	ಬಾಗಲಕೋಟೆ	40
23.	ಧಾರವಾಡ	23
24.	ಗದಗ್	26
25.	ಹಾವೇರಿ	24
26.	ಉತ್ತರ ಕನ್ನಡ	40
27.	ಗುಲ್ಬರ್ಗಾ	136
28.	ಯಾದಗಿರಿ	
29.	ಬಳ್ಳಾರಿ	65
30.	ರಾಯಚೂರು	30
31.	ಕೊಪ್ಪಳ	12
32.	ಬೀದರ್	163
	ಒಟ್ಟು	**2571**

2510(2036) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ):–ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊರಾರ್ಜಿ ದೇಸಾಯಿ/ ನವೋದಯ/ ಏಕಲವ್ಯ ಮತ್ತು ಮುಸ್ಲಿಂ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಚಾರ್ಯರು ಸೇರಿದಂತೆ ಶಿಕ್ಷಕರ ಒಟ್ಟು ಸಂಖ್ಯೆ ಎಷ್ಟು; ಶಾಲೆವಾರು ವಿವರ ನೀಡುವುದು;

ಆ) ಅವರಿಗೆ ನೀಡಲಾಗುತ್ತಿರುವ ವೇತನ ಮತ್ತು ಭತ್ಯೆ ಮುಂತಾದ ಸೌಲಭ್ಯಗಳೇನು;

ಇ) ಇವರುಗಳ ಸೇವಾ ಅವಧಿ ಯಾವಾಗ ಮುಗಿಯಲಿದೆ;

ಈ) ಮುಗಿಯಲಿರುವ ಇವರ ಸೇವಾ ಅವಧಿಯನ್ನು ಮುಂದುವರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ ನವೋದಯ ಮಾದರಿ/ ಏಕಲವ್ಯ ಹಾಗೂ ಮುಸ್ಲಿಂ ವಸತಿ ಶಾಲೆಗಳಲ್ಲಿ ಕರ್ತವ್ಯ

ನಿರ್ವಹಿಸುತ್ತಿರುವ ಪ್ರಾಂಶುಪಾಲರು/ ಶಿಕ್ಷಕರ ಒಟ್ಟು ಸಂಖ್ಯೆ: 868. ಶಾಲಾವಾರು ಶಿಕ್ಷಕರ ವಿವರ ಅನುಬಂಧ–ಆ ರಲ್ಲಿ ನೀಡಲಾಗಿದೆ.

ಆ) ಪ್ರಾಂಶುಪಾಲರಿಗೆ ಪ್ರತಿ ಮಾಹೆಗೆ ರೂ.8,000/ಗಳು ಹಾಗೂ ಶಿಕ್ಷಕರಿಗೆ ರೂ. 6,500/–ಗಳ ಗೌರವಧನ ನೀಡಲಾಗುತ್ತಿದೆ. (ಎಲ್ಲಾ ಭತ್ಯೆಗಳು ಸೇರಿ) ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇರೆಗೆ ಸೇವೆ ಸಲ್ಲಿಸುತ್ತಿರುವ ಪ್ರಾಂಶುಪಾಲರು/ ಶಿಕ್ಷಕರಿಗೆ ಶಿಕ್ಷಣ ಇಲಾಖೆ ನಿಗದಿಪಡಿಸಿದಂತೆ ಸಂಬಳ ನೀಡಲಾಗುತ್ತಿದೆ. ಹಾಗೂ ಸಂಘವು 54 ಸ್ಥಳಗಳಲ್ಲಿ ನಿರ್ಮಿಸಿರುವ ಶಾಲಾ ಸಂಕೀರ್ಣಗಳಲ್ಲಿ ವಸತಿ ಗೃಹಗಳನ್ನು ಶಿಕ್ಷಕರಿಗೆ ನಿರ್ಮಿಸಲಾಗಿದೆ.

ಇ) ಗೌರವ ಧನ ಪ್ರಾಂಶುಪಾಲರು/ ಶಿಕ್ಷಕರ ಸೇವಾ ಅವಧಿ ದಿನಾಂಕ: 10.04.2005ಕ್ಕೆ ಮುಕ್ತಾಯವಾಗುತ್ತದೆ.

ಈ) ಸಂಘವು ನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಗಳಿಗೆ ದಿನಾಂಕ: 01.04.2005ರಿಂದ ನಿರ್ವಹಣೆಗಾಗಿ ವರ್ಗಾಯಿಸಿರುವುದರಿಂದ ಶಿಕ್ಷಕರನ್ನು ಮತ್ತೊಂದು ವರ್ಷಕ್ಕೆ ಮುಂದುವರೆಸಲು ಸಂಘದ 29ನೇ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ–ಧಿಕಾರಿಗಳಿಗೆ ಕೋರಿ ಪತ್ರ ಬರೆಯಲಾಗಿದೆ.

2511(3043) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ):–ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಸುಳ್ಳು ಅಂಕಪಟ್ಟಿ ಪ್ರಕರಣಗಳು ಬೆಳಕಿಗೆ ಬಂದಿದೆಯೇ;

ಆ) ಬಂದಿದ್ದಲ್ಲಿ ಆ ಪ್ರಕರಣಗಳು ಯಾವುವು;

ಇ) ಆ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಈ) ಈ ವಿಶ್ವವಿದ್ಯಾನಿಲಯ ಯಾವ ಸಾಲಿನವರೆಗೆ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿದೆ;

ಉ) ಕಳೆದ ಮೂರು ವರ್ಷಗಳ ಆಡಿಟ್ ಆಕ್ಷೇಪಣೆಗಳು ಯಾವುವು?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಪಟ್ಟಿ ಲಗತ್ತಿಸಿದೆ.

ಇ) ವಿಶ್ವವಿದ್ಯಾನಿಲಯ ಸಂಬಂಧಿತ ಕಾಲೇಜುಗಳಿಗೆ ಆದೇಶ ನೀಡಿ ಈ ವಿದ್ಯಾರ್ಥಿಗಳನ್ನು ತಕ್ಷಣ ಬಿಡುಗಡೆ ಮಾಡಿ ಕಾನೂನು ರೀತ್ಯಾ ಸೂಕ್ತ ಕ್ರಮಕ್ಕೆಗೊಳ್ಳಲು ತಿಳಿಸಲಾಗಿದೆ.

ಈ) 2002–03ನೇ ಸಾಲಿನವರೆಗೆ ಆಡಿಟ್ ಪೂರ್ಣಗೊಳಿಸಲಾಗಿದೆ.

ಉ) ಪಟ್ಟಿ ಲಗತ್ತಿಸಿದೆ.